**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**
**ಸಿಸಿ ನಂಃ 1191/2024**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀ. ವೆಂಕಟೇಶ | ಡಿ.ಡಬ್ಲೂ 01 |
| ತಂದೆ ಹೆಸರುಃ | ದೊಡ್ಡ ಹಣಮಂತ | |
| ವಯಸ್ಸುಃ | 45 ವರ್ಷ | ದಿಃ 26-03-2026 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಬಳಿಚಕ್ರ ಗ್ರಾಮ | |

ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಆರ್ .ಕೆ ವಕೀಲರಿಂದಃ

1. ನನಗೆ 20 ವರ್ಷಗಳಿಂದ ದೂರುದಾರನ ಪರಿಚಯವಿದೆ. ನಾವುಗಳು ಸಹ ಪಾಠಿಗಳು ಆಗಿದ್ದೇವು. ನಾನು ಹಾಗೂ ದೂರುದಾರ ಇಬ್ಬರೂ ಸೇರಿ ಪಂಚಾಯತಿಯ ಕೆಲಸಗಳನ್ನು ಮಾಡುತ್ತಿದ್ದೇವು. ಸನಃ 2015 ರಿಂದ 2021 ರ ಅವಧಿಯಲ್ಲಿ ದೂರುದಾರ ಹಾಗೂ ಸನಃ 2021 ರಿಂದ 2025 ರವರೆಗೆ ನನ್ನ ಹೆಂಡತಿ ಗ್ರಾಮ ಪಂಚಾಯತಿ ಸದಸ್ಯ ಆಗಿದ್ದರು. ದೂರುದಾರ ಗುತ್ತಿಗೆ ಪರವಾನಿಗೆ ಪತ್ರ ಹೊಂದಿದ್ದರು ಹಾಗೂ ನಾವು ಇಬ್ಬರೂ ಸೇರಿ ಪಂಚಾಯತಿ ಕಾಮಗಾರಿ ಕೆಲಸ ಮಾಡುತ್ತಿದ್ದೇವು. ಈಗ 3-4 ವರ್ಷಗಳ ಹಿಂದೆ ದೂರುದಾರ ನನಗೆ ಎಸ್,ಸಿ/ ಎಸ್. ಟಿ ಅಡಿಯಲ್ಲಿ ಸಾಲ ಕೊಡಿಸುವುದಾಗಿ ನನ್ನಿಂದ ನನ್ನ ಖಾತೆಯ ಚೆಕ್, ಬ್ಯಾಂಕ ಪಾಸ್ ಪುಸ್ತಕ, ಆಧಾರ ಕಾರ್ಡ ಹಾಗೂ ಪಹಣಿ ಪತ್ರಿಕೆ ಪಡೆದುಕೊಂಡಿದ್ದರು. ದೂರುದಾರನಿಗೆ ನನ್ನ ಖಾತೆಯ ಸಹಿ ಮಾಡಿದ 2 ಖಾಲಿ ಚೆಕ್ಕಗಳನ್ನು ಕೊಟ್ಟಿದ್ದೇನು. ಆನಂತರ ದೂರುದಾರ ಪರ ವಕೀಲರು ದೂರುದಾರನ ವಿರುದ್ಧ ಚೆಕ್ಕಬೌನ್ಸ ಪ್ರಕರಣ ದಾಖಲು ಮಾಡಿರುವುದಾಗಿ ಕರೆ ಮಾಡಿ ತಿಳಿಸಿದ್ದರು. ನನಗೆ ದೂರುದಾರನ ವಕೀಲರಿಂದ ಯಾವುದೇ ನೋಟಿಸು ಬಂದಿರಲಿಲ್ಲ. ಸಾಲ ಕೊಡಿಸುವುದಾಗಿ ಹೇಳಿ ನನ್ನಿಂದ ಚೆಕ್ಕ ಪಡೆದುಕೊಂಡು ದೂರುದಾರ ನನ್ನ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿದ್ದಾರೆ. ದೂರುದಾರನಿಂದ ನಾನು ಯಾವುದೇ ಸಾಲ ಪಡೆದುಕೊಂಡಿಲ್ಲ. ನಾನು ದೂರುದಾರನ ಮನೆಗೆ ಹೋಗಿ ನನಗೆ ಯಾವ ಬ್ಯಾಂಕಿನಿಂದ

ಸಾಲ ಕೊಡಿಸುವುದಾಗಿ ಹೇಳಿದ್ದೀರಿ ತಿಳಿಸಿ, ನಾನು ಆ ಬ್ಯಾಂಕಿಗೆ ಹೋಗುತ್ತೇನೆ ಎಂದು ಹೇಳಿದ್ದರಿಂದ ಆತ ನನ್ನ ವಿರುದ್ಧ ಈ ಸುಳ್ಳು ಪ್ರಕರಣ ದಾಖಲು ಮಾಡಿದ್ದಾರೆ.

ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯವನ್ನು ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

ಸಿವಿಲ್ ಜೆ.ಎಮ್.ಎಫ್.ಸಿ, ಯಾದಗಿರಿ.